# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 103/2019

ಸಿಡಬ್ಲು: 26 / ಪಿಡಬ್ಲು: 18

ದಿನಾಂಕ: 29.01.2024

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಉಮೇಶ ಲಮಾಣಿ |
| ತಂದೆ /ಗಂಡನ ಹೆಸರು | : | ರೂಪಲೆಪ್ಪ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಪೋಲೀಸ ಮುಖ್ಯ ಪೇದೆ 378, ಗಜೇಂದ್ರಗಡ ಪೋಲೀಸ ಠಾಣೆ |
| ವಾಸ ಸ್ಥಳ | : | ಗಜೇಂದ್ರಗಡ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ನಾನು 2017 ರಿಂದ 2022 ರ ವರೆಗೆ ಮುಂಡರಗಿ ಪೋಲೀಸ ಠಾಣೆಯಲ್ಲಿ ಪೋಲೀಸ ಪೇದೆಯಾಗಿ ಕೆಲಸ ಮಾಡಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿ: 17.09.2019 ರಂದು, ನಾನು ಠಾಣಾ ಕರ್ತವ್ಯದಲ್ಲಿದ್ದಾಗ, ಚಾಸಾ-32 ರವರು ನನಗೆ ಡೋಣಿ ಗ್ರಾಮದಲ್ಲಿ ಒಬ್ಬ ಮಹಿಳೆ ಆತ್ಮಹತ್ಯೆ ಮಾಡಿಕೊಂಡಿದ್ದು, ತನ್ನ ಜೊತೆಗೆ ಬಂದು ಪಂಚನಾಮೆ ಮಾಡುವ ಕಾಲಕ್ಕೆ ಫೋಟೋಗಳನ್ನು ತೆಗೆಯಬೇಕೆಂದು ತಮ್ಮೊಂದಿಗೆ ಕರೆದುಕೊಂಡು ಹೋಗಿರುತ್ತಾರೆ.

3. ಆ ಪ್ರಕಾರ ನಾನು ಠಾಣೆಗೆ ಒದಗಿಸಲಾಗಿದ್ದ ಹ್ಯಾಂಡಿ ಕ್ಯಾಮೆರಾವನ್ನು ತೆಗೆದುಕೊಂಡು ಚಾಸಾ-32 ರವರ ಜೊತೆಗೆ ಡೋಣಿ ಗ್ರಾಮದ ಮೃತಳಾದ ಲಕ್ಷ್ಮಿ ಗಂಡ: ಮಳ್ಳಪ್ಪ ಆವೀನ ಇವರ ಮನೆಗೆ ಹೋಗಿರುತ್ತೇನೆ. ಅಲ್ಲಿ ತಹಶೀಲ್ದಾರರಾದ ಚಾಸಾ-31 ರವರೂ ಕೂಡಾ ಹಾಜರ ಇದ್ದರು. ಆಗ ಪಂಚನಾಮೆ ಸಮಯದಲ್ಲಿ ನಾನು ಫೋಟೋಗಳನ್ನು ತೆಗೆದಿರುತ್ತೇನೆ. ಈಗ ಸದರಿ ಫೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ-2 ರಿಂದ 4, 6 ಮತ್ತು 7 ಎಂದು ಗುರುತಿಸಲಾಗಿರುತ್ತದೆ.

4. ದಿ: 18.09.2019 ರಂದು, ಮೃತಳ ಮೈಮೇಲಿನ ಬಟ್ಟೆಗಳನ್ನು ಪ್ರಾಸಾ-17 ರವರು ತಂದು ಚಾಸಾ-32 ರವರ ಮುಂದೆ ಹಾಜರಪಡಿಸಿದಾಗ, ಸದರಿ ಬಟ್ಟೆಗಳನ್ನು ಪಂಚನಾಮೆ ಮೂಲಕ

ಅಮಾನತ್ತು ಪಡಿಸಿಕೊಳ್ಳುವಾಗ ನಾನು ಫೋಟೋಗಳನ್ನು ತೆಗೆದಿರುತ್ತೇನೆ. ಈಗ ಸದರಿ ಫೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ-17 ಮತ್ತು 18 ಎಂದು ಗುರುತಿಸಲಾಗಿರುತ್ತದೆ. ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 4 ಎಂದು ಗುರುತಿಸಲಾಗಿರುತ್ತದೆ.

5. ಕ್ಯಾಮೆರಾದಲ್ಲಿದ್ದ ಎಲ್ಲಾ ಫೋಟೋಗಳನ್ನು ಕಂಪ್ಯೂಟರಿಗೆ ಅಳವಡಿಸಿ ಫೋಟೋಗಳ ಪ್ರಿಂಟನ್ನು ತೆಗೆದು, ಚಾಸಾ-32 ರವರಿಗೆ ಕೊಟ್ಟಿರುತ್ತೇನೆ.

**ಪಾಟಿ ಸವಾಲುಃ ಶ್ರೀ ಜಿ.ಬಿ. ನೀಲರೆಡ್ಡಿ, 1 ಮತ್ತು 2 ನೇ ಆರೋಪಿತರ ಪರ ವಕೀಲರಿಂದಃ**

6. ಠಾಣೆಗೆ ಒದಗಿಸಲಾದ ಕ್ಯಾಮೆರಾಗಳು ಡಿಜಿಟಲ್ ಕ್ಯಾಮೆರಾಗಳಾಗಿರುತ್ತವೆ ಎಂದರೆ ಸರಿ. ಸದರಿ ಕ್ಯಾಮೆರಾಗಳಲ್ಲಿ ದಿನಾಂಕ ಮತ್ತು ಸಮಯವನ್ನು ಅಳವಡಿಸುವ ಸೌಲಭ್ಯ ಇರುತ್ತದೆ ಎಂದರೆ ಸರಿಯಲ್ಲ.

7. ನಾನು ಫೋಟೋಗ್ರಾಫಿಯಲ್ಲಿ ತರಬೇತಿಯನ್ನು ಪಡೆದಿರುವುದಿಲ್ಲ. ಸದರಿ ಹ್ಯಾಂಡಿ ಕ್ಯಾಮೆರಾ ಯಾವ ಕಂಪನಿಯದು ಎಂದು ಹೇಳಲು ನನಗೆ ಈಗ ನೆನಪಿರುವುದಿಲ್ಲ.

8. ನಿಪಿ-2 ರಿಂದ 4 ಗಳನ್ನು ತೆಗೆದಾಗ, ಸಮಯ ರಾತ್ರಿ 09.10/09.15 ಗಂಟೆಯಾಗಿತ್ತು. ನಿಪಿ-6 ಮತ್ತು 7 ಗಳನ್ನು ತೆಗೆದಾಗ, ಸಮಯ ರಾತ್ರಿ 09.20 ಗಂಟೆಯಾಗಿತ್ತು. ನಿಪಿ-17 ಮತ್ತು 18 ಗಳನ್ನು ತೆಗೆದಾಗ, ಸಮಯ ಬೆಳಿಗ್ಗೆ 06.30 ಗಂಟೆಯಾಗಿತ್ತು.

9. ಡೋಣಿ ಗ್ರಾಮದಲ್ಲಿ ಮಾಡಿದ ಪಂಚನಾಮೆಗೆ ಮತ್ತು ಪೋಲೀಸ ಠಾಣೆಯಲ್ಲಿ ಮಾಡಿದ ಪಂಚನಾಮೆಗೆ ನಾನು ಫೋಟೋಗಳನ್ನು ತೆಗೆದಿರುತ್ತೇನೆ ಎಂದು ಕಾಣಿಸಿ, ಸಹಿಗಳನ್ನು ಮಾಡಿರುವುದಿಲ್ಲ. ನಿಪಿ-2 ರಿಂದ 4, 6, 7, 17 ಮತ್ತು 18 ಇವುಗಳ ಪ್ರಿಂಟನ್ನು ಠಾಣೆಯಲ್ಲಿ ತೆಗೆದ ಬಗ್ಗೆ ನಾನು ಕಲಂ 65 ಸಿ.ಆರ್.ಪಿ.ಸಿ. ಅಡಿಯಲ್ಲಿ ಪ್ರಮಾಣ ಪತ್ರವನ್ನು ತನಿಖಾಧಿಕಾರಿಗಳಿಗೆ ಕೊಟ್ಟಿರುವುದಿಲ್ಲ.

10. ಸದರಿ ಹ್ಯಾಂಡಿ ಕ್ಯಾಮೆರಾವು, ಚಿಪ್ ಹಾಕಿ ಫೋಟೋಗಳನ್ನು ತೆಗೆಯುವ ಸೌಲಭ್ಯವನ್ನು ಹೊಂದಿರುತ್ತದೆ. ನಾನು ಫೋಟೋಗಳನ್ನು ಮಾತ್ರ ತನಿಖಾಧಿಕಾರಿಗೆ ಕೊಟ್ಟಿರುತ್ತೇನೆ. ಸದರಿ ಚಿಪ್ ನಲ್ಲಿಯೇ ಬೇರೆ ಪ್ರಕರಣದ ಫೋಟೋಗಳನ್ನು ತೆಗೆಯಲಾಗಿರುತ್ತದೆ.

11. ಸದರಿ ಫೋಟೋಗಳನ್ನು ಸಿ.ಡಿ.ಗೆ ವರ್ಗಾವಣೆ ಮಾಡಿ ಸಿ.ಡಿ.ಯನ್ನು ತನಿಖಾಧಿಕಾರಿಗಳಿಗೆ ಕೊಟ್ಟಿರುವುದಿಲ್ಲ. ಸದರಿ ಚಿಪ್ ನ್ನು ಕೂಡಾ ನಾನು ತನಿಖಾಧಿಕಾರಿಗಳಿಗೆ ಕೊಟ್ಟಿರುವುದಿಲ್ಲ. ತನಿಖಾಧಿಕಾರಿಯು ನನ್ನನ್ನು ಕರೆದಿರುತ್ತಾರೆ ಮತ್ತು ಎರಡೂ ಪಂಚನಾಮೆಗಳ ಸಮಯದಲ್ಲಿ ನಾನು

ಫೋಟೋಗಳನ್ನು ತೆಗೆದಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ನಾನು ಯಾವುದೇ ಕರ್ತವ್ಯ ನಿರ್ವಹಿಸದೇ ಇದ್ದರೂ ಕೂಡಾ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

## ಮರು ವಿಚಾರಣೆ – ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**